**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.133/2017**

**ಸಿ.ಡಬ್ಲ್ಯೂ-06**

**ಪಿ.ಡಬ್ಲ್ಯೂ-14**

| | | |
|---|---|---|
| ಸಾಕ್ಷಿಯ ಹೆಸರು | : | ಗಂಗಪ್ಪ ಹೊನಗೊಂಡ |
| ತಂದೆ/ಗಂಡನ ಹೆಸರು | : | ಚಂದಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಅಂಜುಟಗಿ |

**ದಿನಾಂಕ:25-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 1 ನನ್ನ ದೊಡ್ಡಪ್ಪ. ಚಾಸಾ 4 ಮತ್ತು 5 ರವರು ನನ್ನ ದೊಡ್ಡಪ್ಪನ ಮಕ್ಕಳು. ಚಾಸಾ 7 ರಿಂದ 12 ರವರ ಪರಿಚಯ ಇರುತ್ತದೆ.

2016 ನೇ ಇಸವಿಯಲ್ಲಿ ನಾನು ಅಮವಾಸೆ ಇದ್ದ ಕಾರಣ ಊರಿನಲ್ಲಿ ದೇವರ ದರ್ಶನಕ್ಕೆ ಹೋಗುವಾಗ 1 ನೇ ಆರೋಪಿಯು ಎದೆಯ ಮೇಲಿನ ಅಂಗಿ ಹಿಡಿದು ಜಗ್ಗಾಡಿ ಅವಾಚ್ಯ ಶಬ್ದಗಳಿಂದ ಬೈದು ಜೀವದ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಚಾಸಾ 1 ರವರ ಹತ್ತಿರ ಹೋಗಿ ನ್ಯಾಯ ಕೂರಿಸಲು 4 ದಿನ ಬಿಟ್ಟು ಬನ್ನಿ ಎಂದು ತಿಳಿಸಿರುತ್ತಾರೆ. ನಂತರ 4 ದಿನ ಬಿಟ್ಟು ಅಂಬಾಭವಾಣಿ ದೇವಸ್ಥಾನದ ಹತ್ತಿರ ನ್ಯಾಯ ಪಂಚಾಯತಿ ಮಾಡುತ್ತಿದ್ದಾಗ ಚಾಸಾ 1 ರವರು 1 ನೇ ಆರೋಪಿಗೆ ನನಗೆ ಯಾಕೆ ಹೊಡೆದಿರುತ್ತೀರಿ ಎಂದು ಕೇಳಲು 2 ನೇ ಆರೋಪಿಯು ಚಾಸಾ 1 ರವರಿಗೆ ಎಡಗಡೆ ಕಪಾಳದ ಮೇಲೆ ಹೊಡೆದಿರುತ್ತಾರೆ. ಚಾಸಾ 4 ಮತ್ತು 5 ರವರಿಗೂ ಸಹ ಕಲ್ಲಿನಿಂದ ಆರೋಪಿತರು ಬೆನ್ನಿಗೆ ಹೊಡೆದಿರುತ್ತಾರೆ. ನನಗೂ ಸಹ ಕಲ್ಲಿನಿಂದ ಹೊಡೆದಿರುತ್ತಾರೆ. ಚಾಸಾ 4 ರವರಿಗೆ ಕಪಾಳದ ಮೇಲೆ ಹೊಡೆದಿರುತ್ತಾರೆ. ನಂತರ ನಾವು ಝಳಕಿ ಪೊಲೀಸ್ ಠಾಣೆಗೆ ಪಿರ್ಯಾದಿ ನೀಡಲು ಹೋಗಿರುತ್ತೇವೆ. ಘಟನೆಯಾದಾಗ 05.30 ಗಂಟೆಯಾಗಿತ್ತು. ಚಾಸಾ 1 ರವರು ಈ ಕುರಿತು ದೂರನ್ನು ನೀಡಿದ್ದು ನಾನು ಈ ಕುರಿತು ಹೇಳಿಕೆ ನೀಡಿರುತ್ತೇನೆ.

-2-

ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಎಸ್.ಎ. ವಕೀಲರಿಂದಃ</u>**

2016 ಕ್ಕಿಂತ ಮೊದಲು ನಮ್ಮ ಹಾಗೂ ಆರೋಪಿತರ ನಡುವೆ ಯಾವುದೇ ಜಗಳ ಇರಲಿಲ್ಲ. ಶ್ರೀಶೈಲ ಹಾಲಳ್ಳಿ ನನಗೆ ಗೊತ್ತು. ನಾನು ಶ್ರೀಶೈಲ ಹಾಲಳ್ಳಿ ಜೊತೆ ಕುಡಿದು ಜಗಳ ಮಾಡುತ್ತಿದ್ದೇನು ಎಂದರೆ ಸರಿಯಲ್ಲ. 1 ನೇ ಆರೋಪಿಯು ಆಗ ಕುಡಿದು ಜಗಳ ಮಾಡಬೇಡ ಈ ವಿಷಯವನ್ನು ನಿಮ್ಮ ತಂದೆ, ಚಿಕ್ಕಪ್ಪ ಮತ್ತು ದೊಡ್ಡಪ್ಪಂದಿರರಿಗೆ ಹೇಳುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಬುದ್ದಿವಾದ ಹೇಳಿದ್ದಕ್ಕಾಗಿ ನಾನು 1 ನೇ ಆರೋಪಿಯ ವಿರುದ್ಧ ಚಾಸಾ 1 ರವರ ಮುಂದೆ ಸುಳ್ಳು ಆಪಾದನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಂತರ ನಾನು, ಚಾಸಾ 1 ಹಾಗೂ ನಮ್ಮ ಮನೆಯ ಜನರು 1 ನೇ ಆರೋಪಿಯ ಮನೆಯ ಹತ್ತಿರ ಹೋಗಿ ಅವರ ಹೆಣ್ಣು ಮಕ್ಕಳಿಗೆ ಬೈದು ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ಘಟನೆಯಾದ ನಂತರ 05.30 ಗಂಟೆಗೆ ಪೋಲೀಸ್ ಠಾಣೆಗೆ ಹೋಗಿರುತ್ತೇವೆ. ನಾನು, ಚಾಸಾ 1, 4 ಮತ್ತು 5 ರವರು ಪಿರ್ಯಾದಿಯನ್ನು ನೀಡಲು ಠಾಣೆಗೆ ಹೋಗಿರುತ್ತೇವೆ. ನನಗೆ ಕಲ್ಲಿನಿಂದ ಬೆನ್ನಿಗೆ ಹೊಡೆದಿರುತ್ತಾರೆ. ನನಗೆ ಕಲ್ಲಿನಿಂದ ಬೆನ್ನಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಹೊಡೆದ ನಂತರ ನಾನು ವಿಜಯಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಆಸ್ಪತ್ರೆಯ ಹೆಸರು ನನಗೆ ಗೊತ್ತಿಲ್ಲ. ಝಳಕಿಯಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ 05-06 ದಿನ ಚಿಕಿತ್ಸೆ ಪಡೆದಿರುತ್ತೇನೆ.

ಅಂಬಾಭವಾನಿ ದೇವಸ್ಥಾನದ ಹತ್ತಿರ ನ್ಯಾಯಪಂಚಾಯತಿ ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನಗೆ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ.</u>**

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)</u>

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**